ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ, ಬೆಂಗಳೂರು-560109

# ಹಿಪ್ಪುನೇರಳೆ ಕೀಟಗಳ ನಿರ್ವಹಣೆ: *ರಸ ಹೀರುವ ಕೀಟಗಳು*

## ನುಸಿ ಪೀಡೆ (ಟೆಟ್ರನೈಕಸ್ ಸ್ಪೀಸಿಸ್)

| | | | |
|---|---|---|---|
|  |  |  |  |
| **ಮೊಟ್ಟೆ** | **ಹಳದಿ ನುಸಿ ಪೀಡೆ** | **ಕೆಂಪು ನುಸಿ ಪೀಡೆ** | **ಎರಡು ಚುಕ್ಕೆಗಳ ನುಸಿ ಪೀಡೆ** |

### ನುಸಿ ಪೀಡೆಗಳನ್ನು ಗುರುತಿಸುವ ಬಗೆ

- **ಮೊಟ್ಟೆ:** ನುಸಿ ಪೀಡೆ ಮೊಟ್ಟೆಗಳು ಗೋಳಾಕಾರವಾಗಿದ್ದು ಬಿಳಿಯ ಬಣ್ಣವನ್ನು ಹೊಂದಿರುತ್ತವೆ
- **ಅಪ್ಸರೆ ಕೀಟ** (Nymphs): ಅಂಡಾಕಾರವಾಗಿದ್ದು ಬಿಳಿ ಬಣ್ಣವನ್ನು ಹೊಂದಿರುತ್ತವೆ
- **ಪ್ರೌಢಾವಸ್ಥೆ:** ದೊಡ್ಡದಾಗಿ ಅಂಡಾಕಾರ ಇಲ್ಲವೆ ಅಗಲವಾಗಿದ್ದು ಹಳದಿ, ಕೆಂಪು ಹಾಗೂ ದೇಹದ ಮೇಲೆ ಕಪ್ಪು ಚುಕ್ಕೆಗಳನ್ನು ಹೊಂದಿರುತ್ತವೆ.

### ಹಾವಳಿಯ ಲಕ್ಷಣಗಳು

- ಹಿಪ್ಪುನೇರಳೆ ಎಲೆಗಳು ಮೇಲ್ಮುಖವಾಗಿ ಮುದುಡಿಕೊಂಡು ಸುಕ್ಕುಗಟ್ಟಿದ ಹಾಗೆ ಕಾಣಿಸುತ್ತವೆ.
- ತೊಟ್ಟು ಉದ್ದವಾಗಿದ್ದು ಎಲೆಗಳು ಚಿಕ್ಕದಾಗಿರುತ್ತವೆ.
- ಗಿಡದ ಬೆಳವಣಿಗೆಯು ಕುಂಠಿತವಾಗಿರುತ್ತದೆ.




### ನಿರ್ವಹಣಾ ಕ್ರಮಗಳು:

- ಜೈವಿಕ ನಿಯಂತ್ರಕವಾದ ಪರಭಕ್ಷಕ ಕೀಟಗಳನ್ನು ಹಿಪ್ಪುನೇರಳೆ ತೋಟಗಳಲ್ಲಿ ಬಿಡಬೇಕು (*ಆಂಬ್ಲೀಶಿಯಸ್ ಒವಾಲಿಸ್*)
- ಸೊಪ್ಪು ಕೊಯ್ಯುವ ಹಂತಕ್ಕೆ ಬಂದಿದ್ದರೆ ಶೇ. 3 ರ ಸಲ್ಫರ್ (80.00 W/W) ದ್ರಾವಣವನ್ನು (3 ಗ್ರಾ. ಪ್ರತೀ ಲೀಟರಿಗೆ) ಎಕರೆಗೆ 450 ಗ್ರಾಂ ಸಲ್ಫರ್ ಪುಡಿಯನ್ನು 150 ಲೀಟರ್ ನೀರಿನಲ್ಲಿ ಬೆರೆಸಿ ಗಿಡದ ಎಲ್ಲಾ ಭಾಗಗಳು ನೆನೆಯುವಂತೆ ಪ್ರಮುಖವಾಗಿ ಎಲೆಯ ಕೆಳಭಾಗದಲ್ಲಿ ಸಿಂಪಡಿಸಬೇಕು. ಅಥವಾ
- ಈ ಕೆಳಗೆ ನೀಡಿರುವ ಯಾವುದಾದರು ಒಂದು ನುಸಿನಾಶಕವನ್ನು ಗಿಡದ ಎಲ್ಲಾ ಭಾಗಗಳು ನೆನೆಯುವಂತೆ ಸಿಂಪರಣೆ ಮಾಡಬೇಕು.



| ನುಸಿನಾಶಕಗಳು | | ಪ್ರಮಾಣ (ಮಿ.ಲೀ/ಲೀ.) | ಎಕರೆಗೆ (ಲೀ.) | ಕಾಯಬೇಕಾದ ಅವಧಿ (ದಿನಗಳು) |
|---|---|---|---|---|
| ರಾಸಾಯನಿಕ ಹೆಸರು | ವಾಣಿಜ್ಯ ಹೆಸರು | | | |
| ಫೆನಜಾಕ್ವಿನ್ 10% EC | ಮ್ಯಾಜಿಸ್ಟರ್ | 2.0 | 150-175 | 20 |
| ಡೈಕೋಫಾಲ್ 18.5% EC | ಕೊಲೋನೆಲ್-ಎಸ್ | 1.5 | 150-175 | 20 |
| ಪ್ರಾಪರ್‌ಜೈಟ್ 57% EC | ಓಮೈಟ್ | 2.5 | 150-175 | 20 |






- ಹಿಪ್ಪುನೇರಳೆಯನ್ನು ಕಟಾವು ಮಾಡಿದ 7-10 ದಿನಗಳ ಒಳಗಾಗಿ ಡೈಮೀಥೋಯೇಟ್ 30% EC (ರೋಗರ್) ಅನ್ನು 2 ಮಿ.ಲಿ. ಪ್ರತೀ ಲೀಟರ್ ನೀರಿಗೆ ಸೇರಿಸಿ ಸಿಂಪಡಿಸಬೇಕು.
- ಶೇ 3 ರ ಸಲ್ಫರ್ (3.0 ಗ್ರಾಂ ಒಂದು ಲೀಟರ್ ನೀರಿಗೆ) ದ್ರಾವಣವನ್ನು ಹಿಪ್ಪುನೇರಳೆ ಗಿಡದ ಎಲ್ಲಾ ಭಾಗಗಳು ನೆನೆಯುವಂತೆ ಹಾಗೂ ಬದುಗಳ ಮೇಲಿನ ಇತರೆ ಸಸ್ಯಗಳ ಮೇಲೂ ಸಹ ಸಿಂಪಡಿಸಬೇಕು. ರಸಹೀರುವ ಕೀಟಗಳ ಬಾಧೆಯು ತೀವ್ರವಾಗಿದ್ದಲ್ಲಿ ಐದು ದಿನದ ಅಂತರದಲ್ಲಿ ಪುನಃ ಸಿಂಪರಣೆ ಮಾಡಬೇಕು. ಸಿಂಪರಣೆ ಮಾಡಿದ ಮೂರು ದಿನಗಳ ನಂತರ ಸಲ್ಫರ್ ಸಿಂಪಡಿಸಿದ ಎಲೆಗಳನ್ನು ರೇಷ್ಮೆ ಹುಳುಗಳಿಗೆ ನೀಡಬಹುದು.

ವಿಶೇಷ ಸೂಚನೆ: ಕೋವಿಡ್-19 ಕಾಯಿಲೆ ಇರುವ ನಿಟ್ಟಿನಲ್ಲಿ ಸಂಸ್ಥೆಯಿಂದ ಮೊಬೈಲ್ ಮೂಲಕ ರೈತರೊಂದಿಗೆ ನೇರ ಸಂಪರ್ಕ ಸಾದಿಸಲು, ಅಹವಾಲು ಸ್ವೀಕರಿಸಲು ಹಾಗೂ ಉಪಯುಕ್ತ ಸಂದೇಶ ನೀಡಲು "ರೇಷ್ಮೆ ಡಾಕ್ಟರ್" ಎಂಬ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ. ಈ ದಿಸೆಯಲ್ಲಿ ರೇಷ್ಮೆಕೃಷಿಯ ಅಭಿವೃದ್ಧಿಗಾಗಿ ಸಂಸ್ಥೆಯಿಂದ ಹೊರತಂದಿರುವ ಎಲ್ಲಾ ತಾಂತ್ರಿಕತೆಗಳನ್ನು ನಮ್ಮ ರೇಷ್ಮೆಕೃಷಿಯ ಭಾಗೀದಾರರಿಗೆ ಸಕಾಲದಲ್ಲಿ ತಲುಪುವಂತೆ ಕ್ರಮವಹಿಸಲಾಗುವುದು.

- ಕರ್ನಾಟಕದ ವಿವಿಧ ಜಿಲ್ಲೆಗಳ ಭಾಗಗಳಲ್ಲಿನ ರೈತರುಗಳಿಂದ ನುಸಿಪೀಡೆ ಹಾವಳಿಯ ಲಕ್ಷಣಗಳ ಬಗ್ಗೆ ದೂರುಗಳು ಬಂದಿರುತ್ತವೆ. ರಾಜ್ಯದ ವಿವಿಧ ಭಾಗದ ರೈತರುಗಳಿಗೆ ರೇಷ್ಮೆ ಇಲಾಖೆಯ ಅಧಿಕಾರಿಗಳು ಈ ಮಾಹಿತಿಯನ್ನು ನೀಡಿ ನುಸಿ ಪೀಡೆ ಹಾವಳಿಯ ನಿರ್ವಹಣೆಗಾಗಿ ಮೇಲ್ಕಂಡ ಕ್ರಮಗಳನ್ನು ಅನುಸರಿಸಲು ಸೂಚಿಸಬಹುದಾಗಿದೆ.

(ಕೀಟ ರೋಗಶಾಸ್ತ್ರ ಮತ್ತು ಕೀಟ ನಿರ್ವಹಣಾ ಶಾಖೆ)

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ನಿರ್ದೇಶಕರು, ಮೊ. ಸಂ. 9591427222

ವಿಜ್ಞಾನಿಗಳು, ಮೊ. ಸಂ. 9902454066, 9901066282, 9632502645, 9880758025